ಒಂದು ಟೈಟಲ್ ಇಡಿ ಕಥೆಯ ಓದಿಗೆ ಒಂದು ಪ್ರವೇಶವನ್ನು ನಿರ್ಧರಿಸುತ್ತದೆ. ಇದನ್ನೆಲ್ಲ ನಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿಲ್ಲ. ನನ್ನ ಬರವಣಿಗೆಯ ವಿಧಾನ ಅಷ್ಟೆ.

◆ ಸತ್ಯ ಮತ್ತು ಕಥನ ಸತ್ಯ ಈ ಎರಡರ ನಡುವಿನ ವ್ಯತ್ಯಾಸ ಏನು?

ಬರಹಗಾರನಿಗೆ ತಾನು ಬರೆದಿದ್ದೆಲ್ಲವೂ ನಿಜವೇ. ಆ ನಂಬಿಕೆಯಲ್ಲಿಯೇ ಅವನು ಬರೆಯುತ್ತಾನೆ. ಬರೆದೇ ನಿಜವಾಗುವುದು ಅದು. ನಿಜವಾದದ್ದನ್ನೇ ಬರೆಯುವುದಲ್ಲ. ಸಣ್ಣ ಮಕ್ಕಳು ಕನಸಲ್ಲಿ ಅಳುತ್ತಾರೆ ನೋಡಿ. ಕೆಟ್ಟ ಕನಸು ಬಿದ್ದಿರುತ್ತದೆ. ಅಲ್ಲಿ ಯಾರೋ ಇವರ ಆಟಿಕೆ ಕಸಿದುಕೊಂಡಿರುತ್ತಾರೆ ಅಂದುಕೊಳ್ಳಿ. ಆಗ ಕನಸಲ್ಲಿ ಅಳುತ್ತಿರುತ್ತಾರೆ; ಅವರ ಕಣ್ಣಿನಿಂದ ನೀರೂ ಬರುತ್ತಿರುತ್ತದೆ. ಅದು ನನಗೆ ಬಹಳ ಮಜಾ ಅನಿಸುತ್ತದೆ. ಆ ಕಂಬನಿ ಯಾವ ಲೋಕದ್ದು? ಬರವಣಿಗೆಯ ಸತ್ಯ ಅಥವಾ ಕಲೆಯ ಮೂಲಕ ನಾವು ಪರಿಭಾವಿಸುವ ಸತ್ಯ, ಕನಸಿನ ಲೋಕದಿಂದ ನಿಜವಾದ ಲೋಕಕ್ಕೆ ಬಂದ ಕಂಬನಿಯ ಸತ್ಯ. ಅದು ಕಲೆಗಾರನಿಗೆ ಅಥವಾ ಸೃಷ್ಟಿಸುವವನಿಗೆ ಬಹಳ ಸತ್ಯ. ಹಾಗಾಗಿಯೇ ಓದುಗನಿಗೂ ಸತ್ಯವಾಗುತ್ತದೆ. ಆ ಇಬ್ಬರೂ ಬೇರೆಯಲ್ಲ. ಕೃತಿಕಾರ ಓದುಗನಿಗಿಂತ ಒಂದೇ ಒಂದು ಕ್ಷಣ ಮುಂಚೆ ಹಿಡಿದಿದ್ದಾನೆ ಅಷ್ಟೆ. ಹಾಗಾಗಿ ಓದುಗನಷ್ಟು ಭಾಗ್ಯವಂತ ಬೇರೆ ಇಲ್ಲ. ಯಾಕೆಂದರೆ ಎಷ್ಟೆಲ್ಲ ಕೃತಿಕಾರರು ಹಿಡಿದಿದ್ದನ್ನು ಹಾಗೆಯೇ ಪಡೆಯುತ್ತಾನಲ್ಲ.

◆ ಗೋಕರ್ಣ ಮತ್ತು ಮುಂಬೈ ನಿಮ್ಮ ಕತೆಗಳಲ್ಲಿಯೂ ಅವು ಪದೇಪದೆ ಬರುತ್ತವೆ. ನಿಮ್ಮನ್ನು ಪ್ರಭಾವಿಸಿದ ಆ ಸ್ಥಳಗಳು ಈಗಲೂ ಹಾಗೆಯೇ ಇದೆ ಅನಿಸುತ್ತದೆಯೇ?

ನಾನು ಮುಂಬೈ ಮೇಲೆ, ಗೋಕರ್ಣದ ಮೇಲೆ ಕತೆಗಳನ್ನು ಬರೆದಿದ್ದೇನೆ ಎನ್ನುವುದು ಪೂರ್ತಿ ಸರಿಯಲ್ಲ. ಒಬ್ಬ ಲೇಖಕ ಕತೆಗಳನ್ನು ಬರೆಯುವುದು ತನ್ನ ಮನಸಲ್ಲಿರುವಂಥ ಪ್ರದೇಶದ ಮೇಲೆ. ಅದನ್ನು ಯಶವಂತ ಚಿತ್ತಾಲರು ತುಂಬ ಚೆಂದವಾಗಿ ಒಂದು ಮುನ್ನುಡಿಯಲ್ಲಿ ಹೇಳಿದ್ದಾರೆ. 'ನನ್ನ ಕತೆಗಳಲ್ಲಿ ಬರುವ ದಾದರ್, ಬ್ಯಾಂಡ್‌ಸ್ಟ್ಯಾಂಡ್‌ಗಳು ನಿಜಜೀವನದಲ್ಲಿಯೂ ಇರುವುದು ಒಂದು ಆಕಸ್ಮಿಕ' ಎಂದು ಅವರು ಹೇಳಿದ್ದಾರೆ. ಪರಿಸರ ಎನ್ನುವುದು ಆ ಪಾತ್ರಗಳನ್ನು ಮತ್ತು ಮಾನವೀಯ ಸಂಘರ್ಷವನ್ನು ರೂಪಿಸುವ ಮತ್ತು ಪೋಷಿಸುವ ಆವರಣವಾಗಿ ಬರುತ್ತದೆ.

ಗೋಕರ್ಣ ಆಗಲಿ ಮುಂಬೈ ಆಗಲಿ ನಾನು ಈಗ ಅಲ್ಲಿ ಇಲ್ಲ. ಆದರೆ ಅಲ್ಲಿಗೆ ಹೋದಾಗ ಈಗಲೂ ನನಗೆ ಬೇಕಾದದ್ದು ಸಿಕ್ಕಿಯೇ ಸಿಗುತ್ತದೆ. ಏನೋ ಮೇಲುಮೇಲಿನ ಗುರುತುಗಳು ಬದಲಾಗಿರಬಹುದು. ಹೆಂಚಿನ ಮನೆ ಇದ್ದಿದ್ದು ಇನ್ನೇನೋ ಆಗಿರಬಹುದು. ಸೋಡಾ ಅಂಗಡಿ ಬದಲಾಗಿರಬಹುದು. ಆದರೆ ಒಂದು ಜಾಗದಿಂದ ನಮಗೆ ಬೇಕಾದ್ದು ನಮಗೆ ಯಾವಾಗಲೂ ಸಿಗುತ್ತದೆ. ಯಾಕೆಂದರೆ ನಮ್ಮ ಮನಸ್ಸು ಅದನ್ನು ಗ್ರಹಿಸುತ್ತದೆ. ಯಾಕೆಂದರೆ ಆ ಜಾಗದ ಆತ್ಮ ಹಾಗೆಯೇ ಇರುತ್ತದೆ.

◆ ಗೋಕರ್ಣ, ಮುಂಬೈ ಕಾಡಿದಷ್ಟು ನಿಮ್ಮೊಳಗಿನ ಕಥೆಗಾರನನ್ನು ಬೆಂಗಳೂರು ಕಾಡಿದ ಹಾಗೆ ಇಲ್ಲ. ಯಾಕೆ ಹೀಗೆ? ಅಥವಾ ಇನ್ನು ಮುಂದಿನ ಕಥೆಗಳಲ್ಲಿ ಬರಲಿಕ್ಕಿದೆಯೇ?

ಬರಲೇ ಬೇಕು. ಯಾಕೆಂದರೆ ಯಾವುದು ನಮ್ಮ ಜೀವನದ ಭಾಗವಾಗಿರುತ್ತದೆಯೋ ಅದು ನಮ್ಮ ಅಜಾಗೃತ ಅನ್ವೇಷಣೆಯ ಭಾಗವೂ ಆಗಿರುತ್ತದೆ. ಈಗಾಗಲೇ ನನ್ನ 'ಕೋಮಲ ಗಾಂಧಾರ', 'ಬಣ್ಣದ ಬಾನುಲಿ', ಸ್ವಲ್ಪ ಮಟ್ಟಿಗೆ 'ಚಾರ್‌ಮಿನಾರ್' ಕಥೆಗಳಲ್ಲಿ ಬೆಂಗಳೂರು ಬಂದಿದೆ. ಅಲ್ಲದೇ ಬೆಂಗಳೂರು ಇನ್ನೂ ಆಗುತ್ತಾ ಇರುವ ಆವರಣ. ಅದು ನಿಜವಾದ ಅರ್ಥದಲ್ಲಿ ಕಾಸ್ಮೊಪಾಲಿಟನ್ ಆಗಿಲ್ಲ. ಈಗ ಅದು ಒಡೆದ ಹಾಲಿನಂತೆಯೇ ಇದೆ. ಮಲ್ಲೇಶ್ವರ ಒಂಥರ, ದಕ್ಷಿಣ ಬೆಂಗಳೂರು ಒಂಥರ, ಆ ಕಡೆ ವೈಟ್‌ಫೀಲ್ಡ್ ಕಡೆಗೆ ಇನ್ನೊಂಥರ ಇದೆ. ಬೆಂಗಳೂರಿನ ಒಂದು ಕಲೆಕ್ಟಿವ್ ಮೈಂಡ್‌ಸೆಟ್ ಅನ್ನುವುದು ಇನ್ನೂ ಆಗುತ್ತ ಇದೆಯಷ್ಟೆ.